## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ನಿಯಮ-72 ರಡಿ ಮಂಡಿಸಿರುವ ಸೂಚನೆಗೆ ಉತ್ತರ

**ಪ್ರಶ್ನೆ:** ಬೆಂಗಳೂರು ದಕ್ಷಿಣ, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ಹುಳಿಮಾವು ಠಾಣಾ ವ್ಯಾಪ್ತಿಯಲ್ಲಿ ಸರ್ವೆ ನಂ.27/2, 29/2, 30, 33, 35/2 ಹಾಗೂ ಇತರೆ ಬಿ.ಡಿ.ಎ. ಸ್ವತ್ತುಗಳಿಗೆ ಅನಧಿಕೃತವಾಗಿ ರೌಡಿಗಳು ದಬ್ಬಾಳಿಕೆಯಿಂದ ಬೇಲಿ ಹಾಕುತ್ತಿದ್ದಾರೆ. ನಿವೇಶನ ಪಡೆದಿರುವ ಫಲಾನುಭವಿಗಳು ಈ ಸಂಬಂಧ ಆರಕ್ಷಕ ಠಾಣೆಗೆ ದೂರು ನೀಡಲು ಹೋದರೆ ಅರ್ಜಿದಾರರನ್ನು ಪೊಲೀಸರು ಅವಾಚ್ಯ ಶಬ್ದಗಳಿಂದ ನಿಂದಿಸಿ, ಹೆದರಿಸುತ್ತಾ, ದಬ್ಬಾಳಿಕೆ, ದೌರ್ಜನ್ಯವೆಸಗುತ್ತಿರುವ ರೌಡಿಗಳ ಪರವಾಗಿಯೇ ಪೊಲೀಸರು ನಿಲ್ಲುತ್ತಿದ್ದು, ದೂರಿನ ಸಂಬಂಧ ಎಫ್.ಐ.ಆರ್ ಮಾಡದೇ ಎನ್.ಸಿ.ಆರ್ ಮಾಡುತ್ತಾ ಅಕ್ರಮ ಮಾಡುವವರಿಗೆ ಪರೋಕ್ಷವಾಗಿ ಪೊಲೀಸರೇ ಸಹಾಯ ಮಾಡುತ್ತಿರುವುದರಿಂದ ನಿವೇಶನದಾರರಿಗೆ ಸೂಕ್ತ ರಕ್ಷಣೆ ಇಲ್ಲದೆ ತುಂಬಾ ಅನ್ಯಾಯ ಉಂಟಾಗುತ್ತಿರುವ ಗಂಭೀರ ಸಮಸ್ಯೆ ಕುರಿತು.

**ಉತ್ತರ:** ಬೆಂಗಳೂರು ದಕ್ಷಿಣ, ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರ ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬಿ.ಡಿ.ಎ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ವಾರ್ಡ್ ನಂ-188 ರ ದೇವರಚಿಕ್ಕನಹಳ್ಳಿಯ ಸರ್ವೇ ನಂ-44 ರಲ್ಲಿ ಭಾರತ ಸರ್ಕಾರದ ಅಧೀನದಲ್ಲಿರುವ ಇಂಡಿಯನ್ ಆಯಿಲ್ ಕಾರ್ಪೋರೇಷನ್‌ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಿಎ ನಿವೇಶನ 12/1 ಹಂಚಿಕೆಯಾಗಿರುತ್ತದೆ. ಸದರಿ ಸಿಎ ಸೈಟಿನ ವಿಚಾರವಾಗಿ ಈಗಾಗಲೇ ಹುಳಿಮಾವು ಪೊಲೀಸ್ ಠಾಣೆಯಲ್ಲಿ 02 ಪ್ರಕರಣಗಳು ದಾಖಲಾಗಿರುತ್ತವೆ.

1. ದಿನಾಂಕ: 21.02.2020 ರಂದು ಶ್ರೀ ಸತೀಶ್ ಜಿ. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಿಎ ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ, ಬಿಡಿಎರವರು ಸ್ವಾಧೀನಪಡಿಸಿಕೊಂಡು ಮೆ॥ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ರವರಿಗೆ ಹಂಚಿಕೆ ಮಾಡಿದ್ದ ಸಿಎ ಸೈಟ್ ನಂ-12/1 ಕ್ಕೆ ಜಯರಾಮ್‌ರವರು ಅತಿಕ್ರಮ ಪ್ರವೇಶ ಮಾಡಿ ತಮಗೆ ಸೇರಿದ್ದೆಂದು ಸೈಟನ್ನು ಅಗೆದು ಬೋರ್ಡ್ ಅನ್ನು ನೆಟ್ಟು ಸೈಟಿಗೆ ಹಾನಿಪಡಿಸಿರುತ್ತಾರೆ ಎಂದು ದೂರು ನೀಡಿದ್ದು ಈ ಬಗ್ಗೆ ಹುಳಿಮಾವು ಪೊಲೀಸ್ ಠಾಣೆ ಮೊ.ಸಂ: 39/2020 ಕಲಂ.447, 427 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಂಡು ಆರೋಪಿತರ ವಿರುದ್ಧ ಘನ 5ನೇ ಎಸಿಎಂಎಂ ನ್ಯಾಯಾಲಯದಲ್ಲಿ ದೋಷಾರೋಪಣ ಪಟ್ಟಿಯನ್ನು ನಿವೇದಿಸಿಕೊಂಡಿದ್ದು, ಹಾಲಿ ಈ ಪ್ರಕರಣವು ಘನ ನ್ಯಾಯಾಲಯದಲ್ಲಿ ಸಿಸಿ ನಂ:13712/2020 ರಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. ಮುಂದಿನ ವಿಚಾರಣಾ ದಿನಾಂಕ: 16/02/2023 ಆಗಿರುತ್ತದೆ.

2. ದಿನಾಂಕ: 31.10.2020 ರಂದು 20.35 ಗಂಟೆಗೆ ಶ್ರೀ ಪ್ರಶಾಂತ್ ಬಿನ್ ಪ್ರತಾಪ್, 33 ವರ್ಷ ಅಸಿಸ್ಟೆಂಟ್ ಮ್ಯಾನೇಜರ್ ಮೆ॥ಇಂಡಿಯನ್ ಆಯಿಲ್ ಕಾರ್ಪೋರೇಷನ್ ಪ್ರೈವೇಟ್ ಲಿಮಿಟೆಡ್ ನಂ-29, ಪಿ ಕಾಳಿಂಗರಾವ್ ರೋಡ್, ಆಂಜುಮಾನ್ ಕೆ.ಆರ್ ಟವರ್ಸ್ ಮಿಷನ್ ರೋಡ್ ರಿಚ್ಮಂಡ್ ಸರ್ಕಲ್ ಬೆಂಗಳೂರು ಇವರು ಹುಳಿಮಾವು ಪೊಲೀಸ್ ಠಾಣೆಯಲ್ಲಿ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ ಬಿಡಿಎ ರವರು ಅವರಿಗೆ ಹಂಚಿಕೆ ಮಾಡಿದ್ದ ಸಿ.ಎ ಸೈಟ್ ನಂ. 12/1 ರಲ್ಲಿನ ಜಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದ ನಮ್ಮ ಕಂಟ್ರಾಕ್ಟರ್ ಮೆ॥ ಮಹಾ ಕನ್‌ಸ್ಟ್ರಕ್ಷನ್‌ರವರು ತಿಳಿಸಿದ್ದೇನೆಂದರೆ, ದಿನಾಂಕ: 30.10.2020 ರಂದು ಸುಮಾರು 12.00 ಗಂಟೆ ಸಮಯದಲ್ಲಿ ಕೆಲವು ಅಪರಿಚಿತರು ದೊಡ್ಡ ಯಂತ್ರಗಳೊಂದಿಗೆ ಸ್ವತ್ತಿನಲ್ಲಿ ನಿರ್ಮಿಸಿದ್ದ ಶೀಟಿನ ಪೆನ್ಸಿಂಗ್ ಅನ್ನು ಕೆಡವಿ ಹಾಕಿ ಕಟ್ಟಡ ನಿರ್ಮಾಣವನ್ನು ಪ್ರಾರಂಭಿಸಿರುತ್ತಾರೆ. ಇದರಿಂದ ಸುಮಾರು 20ಲಕ್ಷ ರೂನಷ್ಟು ನಷ್ಟಪಡಿಸಿರುತ್ತಾರೆ. ಈ ವಿಷಯದ ಬಗ್ಗೆ ಆರೋಪಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೋರಿ ನೀಡಿದ ದೂರನ್ನು ಪಡೆದು

ಹುಳಿಮಾವು ಪೊಲೀಸ್ ಠಾಣೆಯಲ್ಲಿ ಮೊ.ಸಂ.203/2020 ಕಲಂ.427, 447 ರೆ/ವಿ 34 ಐ.ಪಿ.ಸಿ. ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡು, ಆರೋಪಿಯನ್ನು ದಸ್ತಗಿರಿಪಡಿಸಿ ಆರೋಪಿ ವಿರುದ್ಧ ಘನ 5ನೇ ಎಸಿಎಂಎಂ ನ್ಯಾಯಾಲಯದಲ್ಲಿ ದೋಷಾರೋಪಣ ಪಟ್ಟಿಯನ್ನು ನಿವೇದಿಸಿಕೊಂಡಿದ್ದು, ಹಾಲಿ ಈ ಪ್ರಕರಣವು ಘನ ನ್ಯಾಯಾಲಯದಲ್ಲಿ ಸಿಸಿ ನಂ : 17053/2021 ರಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. ಮುಂದಿನ ವಿಚಾರಣಾ ದಿನಾಂಕ : 12/04/2023 ಆಗಿರುತ್ತದೆ.

ಈ ಸ್ವತ್ತಿನ ವಿಚಾರವಾಗಿ ಈಗಾಗಲೇ ಐಟಿಸಿಎಲ್ ರವರಿಗೆ ಸೈಟ್ ಅನ್ನು ಮಂಜೂರು ಮಾಡಿದ್ದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಘನ ಸರ್ವೋಚ್ಛ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. (ಪಿಟಿಷನ್ ಫಾರ್ ಸ್ಪೆಷಲ್ ಲೀವ್) ನಂ.6496/2021 ದಾವೆಯಲ್ಲಿ ಸಲ್ಲಿಸಿದ್ದು, ಆ ಮೇರೆಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ:01.07.2021 ರಂದು "Status quo as of today shall be maintained by the parties with regard to the suit property'' ಎಂದು ಆದೇಶಿಸಿರುತ್ತದೆ. ದಿನಾಂಕ:11.08.2022 ರಂದು The order of status- quo shall continue till the next date of hearing ಎಂದು ಆದೇಶಿಸಿರುತ್ತದೆ. ಮುಂದಿನ ವಿಚಾರಣೆಯನ್ನು ದಿನಾಂಕ: 01.03.2023ರಲ್ಲಿ ನಿಗಧಿಪಡಿಸಿರುತ್ತದೆ.

ಮೇಲಿನ ಪ್ರಕರಣಗಳನ್ನು ಹೊರತುಪಡಿಸಿ ಸರ್ವೆ ನಂ. 27/2, 29/2, 30, 33, 35/2 ಹಾಗೂ ಇತರೆ ಬಿ.ಡಿ.ಎ ಸ್ವತ್ತುಗಳ ವಿಚಾರವಾಗಿ ಫಲಾನುಭವಿಗಳು ಅಥವಾ ಸಂಬಂಧಪಟ್ಟ ನಿವೇಶನದಾರರುಗಳು ಯಾವುದೇ ದೂರುಗಳನ್ನು ನೀಡಿರುವುದಿಲ್ಲ, ಈ ಸಂಬಂಧ ಎನ್‌ಸಿಆರ್‌ಗಳು/ಎಫ್‌ಐಆರ್‌ಗಳು ಹುಳಿಮಾವು ಪೊಲೀಸ್ ಠಾಣೆಯಲ್ಲಿ ವರದಿಯಾಗಿರುವುದಿಲ್ಲ.

ಹೆಚ್‌ಡಿ 79 ಎಸ್‌ಎಸ್‌ಟಿ 2023

(ಆರಗ ಜ್ಞಾನೇಂದ್ರ)
ಮಾನ್ಯ ಗೃಹ ಸಚಿವರು